**ಆರ್ .ಡಬ್ಲ್ಯೂ: 1**

**ಸಾಕ್ಷಿಯನ್ನು ದಿನಾಂಕ 19.06.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**

**ಪಾಟಿ ಸವಾಲು: ಅರ್ಜಿದಾರರ ಪರವಾಗಿ ಶ್ರೀಎ.ಆರ್.ಎಮ್.ಐ., ಪ್ರತಿನಿಧಿರವರಿಂದ:**

**2.** ನಾನು ಮಾನವ ಸಂಪನ್ಮೂಲ ಶಾಖೆಯ ಸಹಾಯಕ ಮ್ಯಾನೇಜರ್ ಇದ್ದೇನೆ. ನಮ್ಮ ಸಂಸ್ಥೆಯ ಕೇಂದ್ರ ಸ್ಥಾನ ಬೆಂಗಳೂರಿನಲ್ಲಿದೆ. ನಾನು ಕಳೆದ 11 ವರ್ಷಗಳಿಂದ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದೇನೆ. ಸಂಸ್ಥೆಯಲ್ಲಿ ಶಿಸ್ತುಪಾಲನೆ ಮತ್ತು certified standing orders ನಿಯಮಗಳು ಇವೆ. ಆದರೆ ಸದರಿ ನಿಯಮಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ.

**3.** ಸಂಸ್ಥೆಯ ಸಿಇಒ ಸಿಬ್ಬಂದಿ ನೇಮಕಾತಿ ಅಧಿಕಾರಿಯಾಗಿದ್ದಾರೆ. ಆದರೆ ಸಿಬ್ಬಂದಿಯವರನ್ನು ಕೆಲಸದಿಂದ ವಜಾ ಮಾಡಬೇಕಾದರೆ ಆ ಬಗ್ಗೆ ನೇಮಿಸಲ್ಪಟ್ಟ ಸಮಿತಿ ವಿಚಾರಣೆ ಮಾಡಿದ ನಂತರ, ಹೊರಿಸಲ್ಪಟ್ಟ ದೋಷಾರೋಪಣೆ ಸಾಬೀತಾದರೆ ಸಿಬ್ಬಂದಿಯವರನ್ನು ಕೆಲಸದಿಂದ ವಜಾ ಮಾಡುವ ಅಧಿಕಾರ ಹೊಂದಿದೆ.

**4.** ಅರ್ಜಿದಾರರನ್ನು ಕೆಲಸದಿಂದ ವಜಾ ಮಾಡಲು ಆ ಬಗ್ಗೆ ನೇಮಿಸಲ್ಪಟ್ಟಿದ್ದ ಸಮಿತಿಯೇ ತೀರ್ಮಾನ ತೆಗೆದುಕೊಂಡಿರುತ್ತದೆ. ಅರ್ಜಿದಾರ ಕುರಿತಂತೆ ಪ್ರಾಥಮಿಕ ತನಿಖಾ ಕ್ರಮವನ್ನು ಕೈಗೊಳ್ಳಲಾಗಿದೆ ಆದರೆ ತನಿಖಾ ಕ್ರಮದ ನಿರ್ಣಯದ ಪ್ರತಿಯನ್ನು ನಾವು ನ್ಯಾಯಾಲಯಕ್ಕೆ ನೀಡಿಲ್ಲ. ನಾನು ಉಲ್ಲೇಖಿಸಿದ ಪ್ರಾಥಮಿಕ ತನಿಖಾ ವರದಿಯ ನಿರ್ಣಯದ ವರದಿಯ ಪ್ರತಿಯನ್ನು ಅರ್ಜಿದಾರರಿಗೆ ನೀಡಿ ಆತನಿಂದ ನೀವೇನಾದರು ಆತನ ಆಕ್ಷೇಪಣೆಯನ್ನು ಪಡೆದಿರುವಿರಾ ಎಂದರೆ ಇಲ್ಲ.

**5.** ಅರ್ಜಿದಾರರ ವಿರುದ್ಧ ಸಾಕಷ್ಟು ಗ್ರಾಹಕರು ದೂರು ಸಲ್ಲಿಸಿರುವುದಾಗಿ ನಿಮ್ಮ ಹೇಳಿಕೆಯಲ್ಲಿ ನುಡಿದಿರುವಿರಿ, ಅಂತಹ ಗ್ರಾಹಕರ ದೂರು ಪ್ರತಿಗಳನ್ನೆನಾದರೂ ನೀವು ಅರ್ಜಿದಾರರಿಗೆ ನೀಡಿರುವಿರಾ ಎಂದರೆ ನೀಡಿದ್ದೇವೆ. ಆದರೆ ಈ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿಲ್ಲ.

**6**. ನಮ್ಮ ಸಂಸ್ಥೆಯ ಸಿಬ್ಬಂದಿಗಳನ್ನು ಸಂಸ್ಥೆ ನೇರವಾಗಿ ನೇಮಕಾತಿ ಮಾಡಿಕೊಳ್ಳುತ್ತದೆಯೇ ವಿನಃ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದಿಲ್ಲ. ಅರ್ಜಿದಾರರು ಅಂಗ ನ್ಯೂನ್ಯತೆಯಿಂದ ಬಳಲುತ್ತಿರುವ ಸಂಗತಿಯ ಬಗ್ಗೆ ನನಗೆ ಸಂಪೂರ್ಣ ಅರಿವಿದೆ.

**7.** ಅರ್ಜಿದಾರರು ತನ್ನ ಮೇಲಾಧಿಕಾರಿಗಳ ಜೊತೆಯಲ್ಲಿ ಅಸಭ್ಯ ಮತ್ತು ಒರಟು ರೀತಿಯಲ್ಲಿ ನೆಡೆದುಕೊಂಡಿದ್ದರು ಎಂಬ ಸಂಗತಿಯನ್ನು ಪುಷ್ಟೀಕರಿಸುವಂತೆ ನಾನು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿಲ್ಲ.

**8.** ಸಂಧಾನ ಕಾರ್ಯದಲ್ಲಿ ಸಂಧಾನಕಾರರ ಮುಂದೆ ನಾವು ಅರ್ಜಿದಾರರಿಗೆ ಮತ್ತೊಂದು ಅವಕಾಶವನ್ನು ನೀಡುವುದಾಗಿ ನುಡಿದಿದ್ದೆವು. ಅದರಂತೆ ಅವಕಾಶವನ್ನು ನೀಡಿದ್ದೆವೂ ಸಹ. ಅಂಗ ನ್ಯೂನ್ಯತೆಗೆ ಒಳಪಟ್ಟಿರುವ ಅರ್ಜಿದಾರರನ್ನು ಕೆಲಸದಿಂದ ವಜಾ ಮಾಡಿಸಿ ಪರ್ಯಾಯವಾಗಿ ಆತನ ಜಾಗದಲ್ಲಿ ನನಗೆ ಬೇಕಾದ ವ್ಯಕ್ತಿಯನ್ನು ನೇಮಕಾತಿ ಮಾಡಿಕೊಳ್ಳುವ ಸಲುವಾಗಿ ನಾನು ಮೇಲಾಧಿಕಾರಿಗಳಿಗೆ ಅಸತ್ಯ ಮಾಹಿತಿಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

**ಅರ್ಜಿ ಸಂಖ್ಯೆಃ3/2023**

**ಆರ್ .ಡಬ್ಲ್ಯೂಃ 1**

**9.** ಸಂಸ್ಥೆಗೆ ಸಿಬ್ಬಂದಿ ವರ್ಗದ ವೆಚ್ಚವನ್ನು ಕಡಿತಗೊಳಿಸುವ ಸಲುವಾಗಿ ಮತ್ತು ಉದ್ದೇಶಕ್ಕೆ ನೀವು ದೀರ್ಘಕಾಲ ಕರ್ತವ್ಯ ನಿರ್ವಹಿಸಿರುವ ಅರ್ಜಿದಾರರನ್ನು ಉದ್ದೇಶ ಪೂರ್ವಕವಾಗಿ ಕೆಲಸದಿಂದ ತೆಗೆದಿರುವಿರಿ ಎಂದರೆ ಸರಿಯಲ್ಲ.

**10.** ಅರ್ಜಿದಾರರ ವಿರುದ್ಧ ನಾನು ವೈಯಕ್ತಿಕ ದ್ವೇಷವನ್ನು ಹೊಂದಿದ್ದು ಅದನ್ನು ಈಡೇರಿಸಲು ಅಸತ್ಯ ಮತ್ತು ಕಾಲ್ಪನಿಕ ಸಂಗತಿಗಳನ್ನು ನಮೂದಿಸಿ ಅರ್ಜಿದಾರರ ವಿರುದ್ಧ ಮಿತ್ಯ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಾಡಿದ್ದೀನಿ ಎನ್ನಲಾದ ಗಮನಾರ್ಹ ತಪ್ಪನ್ನು ಮುಚ್ಚಿ ಹಾಕುವ ಸಲುವಾಗಿ ಈಗ ನ್ಯಾಯಾಲಯದ ಮುಂದೆ ಸಹ ಅರ್ಜಿದಾರರ ವಿರುದ್ಧ ಅಸತ್ಯ ಸಾಕ್ಷಿ ನುಡಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಎದುರುದಾರರ ಪರ**

**ಇಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**